# ಅಮೂರ್ತ ಗಣೇಶ





■ ಲೇಖನ : ಕೇಶವ ಕುಡ್ಲ
ಕಲೆ: ಶೇಖರ್ ಬಳ್ಳಾರಿ

ವೇದ ಪುರಾಣಗಳ ಕಾಲದಲ್ಲೇ ಹುಟ್ಟಿಕೊಂಡ ಗಣೇಶನ ಕಲ್ಪನೆ ಇಂದಿಗೂ ಕಲಾವಿದರ ಕಣ್ಮಣಿಯೇ. ಆಗ ಭಕ್ತಿಗಾಗಿಯಷ್ಟೇ ಕಲೆ ಎಂಬ ಭಾವನೆ ಇದ್ದ ಕಾರಣದಿಂದ ಗಣೇಶನ ಚಿತ್ರಣ ಸಾಂಪ್ರದಾಯಿಕತೆಯಿಂದ ಆಚೆಗೆ ಬಂದಿರಲಿಲ್ಲ. ಗಣೇಶನಿಗೆ ಪುರಾಣೋಕ್ತ ಕಥೆಗಳು ಆರೋಪಿಸಿದ್ದ ಆಕಾರಗಳು ಹಾಗೂ ಪೂಜಾ ಸ್ತೋತ್ರಗಳಲ್ಲಿನ ನಿರ್ದಿಷ್ಟ ಗುಣಲಕ್ಷಣಗಳ ಅಧಾರದಲ್ಲಿ ಗಣೇಶ ರೂಪು ತಳೆಯುತ್ತಿದ್ದ.

ಇತ್ತೀಚಿನ ದಿನಗಳಲ್ಲಿ ಕಲಾವಿದರು ಗಣೇಶನನ್ನು ನೋಡುವ ದೃಷ್ಟಿ ಬದಲಾಗಿದೆ. ನಮ್ಮ ಹಿರಿಯರು ನೀಡಿರುವ ರೂಪಗಳು ನಿಧಾನಕ್ಕೆ ಮರೆಯಾಗುತ್ತಾ ಆಧುನಿಕ ರೂಪದಲ್ಲಿ ಗಣೇಶ ಕಾಣಿಸಿಕೊಳ್ಳ ತೊಡಗಿದ್ದಾನೆ. ಉಬ್ಬುಚಿತ್ರಗಳಲ್ಲಿ, ಮ್ಯೂರಲ್ ಗಳಲ್ಲಿ, ಕೊಲಾಜ್ ರೂಪದಲ್ಲಿ, ಮೈಮೇಲಿನ ಹಚ್ಚೆಗಳ ರೂಪದಲ್ಲಿ ಮತ್ತು ನವ್ಯ–ಅಮೂರ್ತ ಕಲೆಯಲ್ಲಿ ಗಜಮುಖನನ್ನು ಕಾಣಬಹುದು. ಗಣೇಶನ ಆಕಾರವೇ ಕಲಾವಿದರಿಗೆ ಸೋಜಿಗ! ಆತನ ದೈಹಿಕ ಸಂಯೋಜನೆ ಕಲಾವಿದರನ್ನು ಮರುಳು ಮಾಡುವಂತಹುದು! ಗಜಾನನ ಜನಪ್ರಿಯ ದೇವತೆ. ಅಂದೂ ಇಂದೂ ಆ ಜನಪ್ರಿಯತೆ ಹಾಗೆ ಉಳಿದಿದೆ. ಚಿತ್ರಕಲೆಯ ಬೆಳವಣಿಗೆಯ ಮತ್ತು ಪರಿವರ್ತನೆಯ ಇತಿಹಾಸದ ಹಲವಾರು ಕಾಲಘಟ್ಟದಲ್ಲಿ ಆತನನ್ನು ವಿವಿಧ ಪ್ರಕಾರಗಳಲ್ಲಿ ಚಿತ್ರಿಸಿಕೊಳ್ಳುವುದು ನಡೆದೇ ಇದೆ. ಗಣಪತಿಯು ಆಧುನಿಕ ನವ್ಯ ಕಲಾವಿದರ ಮನ ಸೆಳೆಯದೆ ಉಳಿಯಲು ಸಾಧ್ಯವೆ?

ಅನೇಕ ಕಲಾವಿದರು ಹೇಳುವಂತೆ ಗಣಪತಿಯ ವ್ಯಕ್ತಿತ್ವ ವಿಶಿಷ್ಟ. ಆತ ಮಹಾಕಾಯ, ಲಂಬೋದರ, ಗಜಕರ್ಣ– ಎಲ್ಲಕ್ಕಿಂತ ಹೆಚ್ಚಾಗಿ ಆತ ವಿಕಟ! ಹೀಗಾಗಿ ಆತನನ್ನು ಚಿತ್ರಿಸುವಾಗ ಯಾವುದೇ ಕಟ್ಟುಪಾಡುಗಳ ಬಂಧನವಿಲ್ಲ. ಗಣಪತಿಯನ್ನು ಚಿತ್ರಿಸುವಾಗ ನವ್ಯ ಕಲಾವಿದರು ಸಂಪೂರ್ಣ ಸ್ವಾತಂತ್ರ್ಯ ಪಡೆದುಕೊಳ್ಳಲು ಕಾರಣಗಳಿವೆ. ಬೇರೆಲ್ಲ ದೇವತೆಗಳನ್ನು ನಿರ್ದಿಷ್ಟ ಆಕಾರಗಳ

(8ನೇ ಪುಟ ನೋಡಿ)